

# ಅಡ್ವಾನ್ಸ್ಡ್ ಫ್ಲೋ

## ಮಾಲ್‌ವೇರ್ ತಡೆಗೋಡೆ

ಡಿಜಿಟಲ್ ಲೋಕದಲ್ಲಿ ಹೈ–ಫೈ ವಂಚಕರ ಜಾಲವೂ ಹಿಗ್ಗುತ್ತಿದೆ. ನಾನಾ ವೇಷ ತೊಟ್ಟು ಡಿವೈಎಸ್‌ಗಳ ಒಳಗೆ ಮಾಲ್‌ವೇರ್ ಇನ್‌ಸ್ಟಾಲ್ ಆಗುವಂತೆ ಕುತಂತ್ರಾಂಶ ಹರಿಬಿಡುತ್ತಿದ್ದಾರೆ. ಇದಕ್ಕೆ ಮೂಲದಲ್ಲೇ ತಡೆಗೋಡೆ ನಿರ್ಮಿಸಲು ಗೂಗಲ್ 'ಅಡ್ವಾನ್ಸ್ಡ್ ಫ್ಲೋ' ಹೆಸರಿನಲ್ಲಿ ಹೊಸ ಪ್ರಯತ್ನ ಮಾಡಿದೆ.

■ **ಶಶಿಕುಮಾರ್ ಸಿ.**

ಗೂಗಲ್‌ನ ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ (ಓಎಸ್) ಬಳಸುವ ಸ್ಮಾರ್ಟ್‌ಫೋನ್ ಸೇರಿದಂತೆ ಡಿವೈಸ್‌ಗಳಲ್ಲಿನ ಆ್ಯಪ್‌ಗಳ ಸುರಕ್ಷೆಯನ್ನು ಮತ್ತಷ್ಟು ಬಲಪಡಿಸಲು 'ಅಡ್ವಾನ್ಸ್ಡ್ ಫ್ಲೋ' (ಸುಧಾರಿತ ಫ್ಲೋ) ಎಂಬ ಹೊಸ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಬದಲಾವಣೆಯು ಮುಖ್ಯವಾಗಿ ಪ್ಲೇ ಸ್ಟೋರ್‌ನ ಹೊರಗಿನಿಂದ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡುವ ಸೈಡ್‌ಲೋಡಿಂಗ್ ಪ್ರಕ್ರಿಯೆಯ ಮೇಲೆ ಹೆಚ್ಚಿನ ನಿರ್ಬಂಧ ಹೇರುತ್ತದೆ.

ಆನ್‌ಲೈನ್ ವಂಚನೆಗಳು ಮತ್ತು ಮಾಲ್‌ವೇರ್ ದಾಳಿಗಳು ಈಗೀಗ ಗಣನೀಯವಾಗಿ ಹೆಚ್ಚುತ್ತಿವೆ ಎನ್ನುವುದು ಗೂಗಲ್‌ನ ಪ್ರಬಲ ವಾದ. ವಂಚಕರು ಫೋನ್ ಕರೆ ಅಥವಾ ಮೆಸೇಜ್ ಮೂಲಕ ಬಳಕೆದಾರರನ್ನು ಪುಸಲಾಯಿಸಿ, ಪ್ಲೇ ಸ್ಟೋರ್‌ನ ಹೊರಗಿನ ಅಪಾಯಕಾರಿ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡುವಂತೆ ಮಾಡುತ್ತಾರೆ. ಇದರ ಬಗ್ಗೆ ಅರಿಯದ ಜನಸಾಮಾನ್ಯರು ವಂಚಕರ ಮೋಸದ ಜಾಲಕ್ಕೆ ಬಲಿಯಾಗಿ ಹಣ ಕಳೆದುಕೊಳ್ಳುತ್ತಾರೆ. ವಂಚಕರ ಕುತಂತ್ರಾಂಶಗಳನ್ನು ತಡೆದು ಅಮಾಯಕರು ಅಪಾಯಕ್ಕೆ ತುತ್ತಾಗುವುದನ್ನು ತಡೆಯಲು 'ಹೆಚ್ಚಿನ ಘರ್ಷಣೆ' (High Friction) ಎಂದರೆ, ಆ್ಯಪ್ ಇನ್‌ಸ್ಟಾಲ್ ಮಾಡುವ ಪ್ರಕ್ರಿಯೆಯನ್ನು ಉದ್ದೇಶಪೂರ್ವಕವಾಗಿ ನಿಧಾನಗೊಳಿಸುವ ತಂತ್ರವನ್ನು 'ಅಡ್ವಾನ್ಸ್ಡ್ ಫ್ಲೋ'ನಲ್ಲಿ ಗೂಗಲ್ ಬಳಸುತ್ತಿದೆ.

ಇದು ಅನುಭವಿ ಅಥವಾ 'ಪವರ್ ಯೂಸರ್'ಗಳಿಗಾಗಿ ಇರುವ ವಿಶೇಷ ಆಯ್ಕೆ. ಸಾಮಾನ್ಯ ಬಳಕೆದಾರರು ಅಜಾಗರೂಕತೆಯಿಂದ ಮಾಲ್‌ವೇರ್ ಇನ್‌ಸ್ಟಾಲ್ ಮಾಡಿಕೊಳ್ಳಬಾರದು ಎಂಬುದು ಗೂಗಲ್ ಆಶಯ. ಆದರೆ, ತಾಂತ್ರಿಕ ಜ್ಞಾನವಿರುವ ಮತ್ತು ಉದ್ದೇಶಪೂರ್ವಕವಾಗಿ ಹೊರಗಿನ ಆ್ಯಪ್ ಬಳಸಲು ಬಯಸುವವರಿಗಾಗಿ ಈ ಫೀಚರ್ ಒಂದು ಪರ್ಸನಲ್ ಮಾಲ್‌ವೇರ್ ಪ್ರೊಟೆಕ್ಟರ್ ಆಗಿ ಕೆಲಸ ಮಾಡಲಿದೆ.

### ಹೇಗೆ ಕೆಲಸ ಮಾಡುತ್ತದೆ?

ಒಬ್ಬ ಬಳಕೆದಾರರು ಪರಿಶೀಲಿಸದ (Unverified) ಡೆವಲಪರ್‌ನ ಆ್ಯಪ್ ಇನ್‌ಸ್ಟಾಲ್ ಮಾಡಬೇಕೆಂದರೆ ಈ ಕೆಳಗಿನ ಕಠಿಣ ಹಂತಗಳನ್ನು ದಾಟಲೇಬೇಕಾಗುತ್ತದೆ. ಅವುಗಳೆಂದರೆ...

- **ಡೆವಲಪರ್ ಮೋಡ್ ಸಕ್ರಿಯಗೊಳಿಸುವುದು:** ಮೊದಲು ಡಿವೈಎಸ್‌ಗಳ ಸೆಟ್ಟಿಂಗ್ಸ್‌ನಲ್ಲಿ 'ಡೆವಲಪರ್ ಮೋಡ್' ಆನ್ ಮಾಡಬೇಕು.
- **ವಂಚನೆಯ ಎಚ್ಚರಿಕೆ:** ಆ್ಯಪ್ ಇನ್‌ಸ್ಟಾಲ್‌ಗಾಗಿ ಒತ್ತಡವಿದೆಯೇ ಎಂಬುದರ ಬಗ್ಗೆ ತಿಳಿಸಬೇಕು.
- **ಫೋನ್ ರೀಸ್ಟಾರ್ಟ್:** ಪ್ರಕ್ರಿಯೆಯನ್ನು ಮುಂದುವರಿಸಲು ಫೋನ್ ರೀಸ್ಟಾರ್ಟ್ ಕಡ್ಡಾಯ. ಇದು ವಂಚಕರು ಫೋನ್ ಅನ್ನು ರಿಮೋಟ್ ಆಗಿ ಕಂಟ್ರೋಲ್ ಮಾಡುತ್ತಿದ್ದರೆ ಆ ಸಂಪರ್ಕವನ್ನು ಕಡಿತಗೊಳಿಸುತ್ತದೆ.
- **24 ಗಂಟೆಗಳ ಕಾಯುವಿಕೆ:** ಇದು ಅತಿ ಪ್ರಮುಖ ಹಂತ. 'ಅಡ್ವಾನ್ಸ್ಡ್ ಫ್ಲೋ' ಆಯ್ಕೆ ಮಾಡಿದ ನಂತರ ಬಳಕೆದಾರರು ಕನಿಷ್ಠ 24 ಗಂಟೆ ಕಾಯಬೇಕಾಗುತ್ತದೆ. ಈ ಅವಧಿಯಲ್ಲಿ ಬಳಕೆದಾರರಿಗೆ ತಾವು ಮಾಡುತ್ತಿರುವುದು ಸರಿಯೇ ಎಂದು ಯೋಚಿಸಲು ಅವಕಾಶವಿದೆ.
- **ಮರುದೃಢೀಕರಣ:** 24 ಗಂಟೆಗಳ ನಂತರ ಮತ್ತೊಮ್ಮೆ ದೃಢೀಕರಿಸಿದ ಮೇಲಷ್ಟೇ ಆ್ಯಪ್ ಇನ್‌ಸ್ಟಾಲ್ ಮಾಡಲು ಸಾಧ್ಯ.

### ಬಳಕೆದಾರರಿಗಾಗುವ ಲಾಭ, ನಷ್ಟ

ಮಾಲ್‌ವೇರ್ ತಡೆಗೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಅಜಾಗರೂಕತೆಯಿಂದ ಇನ್‌ಸ್ಟಾಲ್ ಆಗುವ ಅಪಾಯಕಾರಿ ಆ್ಯಪ್‌ಗಳಿಗೆ ಬ್ರೇಕ್ ಹಾಕಿದಂತಾಗುತ್ತದೆ. ವಂಚನೆಗೆ ಕಡಿವಾಣ ಹಾಕುವುದರಿಂದ ಗಡಿಬಿಡಿಯಲ್ಲಿ ಆ್ಯಪ್ ಇನ್‌ಸ್ಟಾಲ್ ಮಾಡಿಸುವ ತಂತ್ರ ಫಲಿಸುವುದಿಲ್ಲ. ಹಾಗೆಯೇ ಡೆವಲಪರ್‌ಗಳ ಗುರುತು ತಿಳಿಯುವುದರಿಂದ ಅಕ್ರಮ ಕೆಲಸ ಮಾಡುವವರಿಗೆ ಭಯವಿರುತ್ತದೆ. ಅವರ ಜಾಡು ಹಿಡಿಯಲು ಪೊಲೀಸರಿಗೆ ಸುಲಭ ಹಾದಿ ಸಿಕ್ಕಂತಾಗುತ್ತದೆ.

ಸಮಯ ವ್ಯಯವಾಗುವುದು ಇಲ್ಲಿ ಗಮನಾರ್ಹ ವಿಚಾರ. ಅನುಭವಿ ಬಳಕೆದಾರರಿಗೂ ಒಂದು ಸಣ್ಣ ಆ್ಯಪ್ ಇನ್‌ಸ್ಟಾಲ್ ಮಾಡಲು 24 ಗಂಟೆ ಕಾಯುವುದು ಕಿರಿಕಿರಿಯಾಗಬಹುದು. ಮುಕ್ತ ವ್ಯವಸ್ಥೆಗೆ ಪೆಟ್ಟು ಬೀಳುತ್ತದೆ. ಆ್ಯಂಡ್ರಾಯ್ಡ್‌ನ 'ಮುಕ್ತ ವೇದಿಕೆ' ಎಂಬ ಹೆಗ್ಗಳಿಕೆಗೆ ಈ ನಿಯಂತ್ರಣಗಳು ಅಡ್ಡಿಯಾಗಬಹುದು ಎಂಬ ವಾದವಿದೆ. ಹವ್ಯಾಸಿ ಡೆವಲಪರ್‌ಗಳಿಗೆ ಇದರಿಂದ ತೊಂದರೆ ಕಟ್ಟಿಟ್ಟ ಬುತ್ತಿ. ಸಣ್ಣ ಅಥವಾ ಸ್ವತಂತ್ರ ಡೆವಲಪರ್‌ಗಳಿಗೆ ಗೂಗಲ್‌ನ ಈ ಎಲ್ಲಾ ನಿಯಮ ಪಾಲಿಸುವುದು ತೀರಾ ಕಷ್ಟವಾಗಲಿದೆ.

ಗೂಗಲ್‌ನ ಈ ಫೀಚರ್ ಆಂಡ್ರಾಯ್ಡ್ ಅನ್ನು ಐಫೋನ್‌ನಲ್ಲಿರುವಂತೆ ಹೆಚ್ಚು ಸುರಕ್ಷಿತವಾಗಿಡಲು ಪ್ರಯತ್ನಿಸುತ್ತದೆ. ಇದು ಸಾಮಾನ್ಯ ಜನರಿಗೆ ರಕ್ಷಣೆ ನೀಡಿದರೂ, ಫೋನ್‌ನೊಂದಿಗೆ ಪ್ರಯೋಗ ಮಾಡುವ ಪವರ್ ಯೂಸರ್‌ಗಳಿಗೆ ಸ್ವಲ್ಪ ಕಷ್ಟವೆನಿಸುತ್ತದೆ. ಆದರೆ, ಸುರಕ್ಷತೆಯ ದೃಷ್ಟಿಯಿಂದ ಇದು ಒಂದು ದೊಡ್ಡ ಹೆಜ್ಜೆಯಾಗಿದೆ. ■

### ಡೆವಲಪರ್‌ಗಳಿಗೆ ಹೊಸ ನಿಯಮ

ಗೂಗಲ್ ತನ್ನ ಇಕೋಸಿಸ್ಟಮ್ ಅನ್ನು ಮತ್ತಷ್ಟು ಭದ್ರಪಡಿಸಲು ಡೆವಲಪರ್‌ಗಳಿಗೂ ಕೆಲವೊಂದಿಷ್ಟು ಕಟ್ಟುನಿಟ್ಟಿನ ನಿಯಮಗಳನ್ನು ಕಡ್ಡಾಯಗೊಳಿಸಿದೆ. ಇನ್ನು ಮುಂದೆ ಪ್ಲೇ ಸ್ಟೋರ್ ಹೊರಗೆ ಆ್ಯಪ್ ಹಂಚುವ ಡೆವಲಪರ್‌ಗಳು ಸಹ ಗೂಗಲ್ ಬಳಿ ತಮ್ಮ ಗುರುತನ್ನು ಸಾಬೀತುಪಡಿಸಬೇಕು. ಇದು ಮಾಲ್‌ವೇರ್‌ಗಳ ಜಾಲ ಸಕ್ರಿಯಗೊಳ್ಳುವುದನ್ನು ತಡೆಗಟ್ಟುತ್ತದೆ. ಡೆವಲಪರ್‌ಗಳು ತಮ್ಮ ಕಾನೂನುಬದ್ಧ ಹೆಸರು ಮತ್ತು ವಿವರಗಳನ್ನು ಒದಗಿಸಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಲಿದೆ.